ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 253 |
| ಸದಸ್ಯರ ಹೆಸರು | : | ಶ್ರೀ ಮಧು ಜಿ. ಮಾದೇಗೌಡ (ಪದವೀಧರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 15-02-2023 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಮೈಸೂರು-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ-275 ಸಂಚಾರಕ್ಕೆ ಮುಕ್ತಗೊಂಡ ನಂತರ ಹೆದ್ದಾರಿಯಲ್ಲಿ ಯಾವ ರೀತಿಯ ವಾಹನಗಳು ಸಂಚರಿಸಲು ಅವಕಾಶ ನೀಡಲು ಉದ್ದೇಶಿಸಲಾಗಿದೆ; (ವಿವರ ನೀಡುವುದು) | ರಾಷ್ಟ್ರೀಯ ಹೆದ್ದಾರಿ-275 ಬೆಂಗಳೂರು- ಮೈಸೂರು ವಿಭಾಗದ ರಸ್ತೆಯು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಕಾರ್ಯ ವ್ಯಾಪ್ತಿಗೆ ಒಳಪಟ್ಟಿದ್ದು, ಈ ಕೆಳಕಂಡಂತೆ ವರದಿ ನೀಡಿರುತ್ತಾರೆ.<br>ರಾಷ್ಟ್ರೀಯ ಹೆದ್ದಾರಿ-275 ಸಂಚಾರಕ್ಕೆ ಮುಕ್ತಗೊಂಡ ನಂತರ ಈ ಕೆಳಕಂಡ ವಾಹನಗಳ ಸಂಚಾರಕ್ಕೆ ಪ್ರವೇಶ ಕಲ್ಪಿಸಲಾಗಿದೆ.<br>1. Car/Jeep/Van/Light Motor Vehicle<br>2. Light Commercial vehicle/ Light Goods Vehicle or Mini Bus<br>3. Bus/Truck (Two Axles)<br>4. Three Axle Commercial Vehicle<br>5. HCM or EME or MAV (4 to 6 Axles)<br>6. Oversized Vehicle (Seven or More Axles).<br>ದ್ವಿಚಕ್ರ, ತ್ರಿಚಕ್ರ ವಾಹನಗಳು, ನಾನ್ ಮೋಟರೈಸ್ಡ್ ವೆಹಿಕಲ್ಸ್, ಟ್ರಾಕ್ಟರ್‌ಗಳು ಮತ್ತು ಎತ್ತಿನ ಗಾಡಿಗಳನ್ನು ಸಂಚಾರಕ್ಕೆ ನಿರ್ಬಂಧಿಸುವ ಪ್ರಸ್ತಾವನೆಯು ಸಕ್ಷಮ ಪ್ರಾಧಿಕಾರದಿಂದ ಪರಿಗಣಿಸುವ ಹಂತದಲ್ಲಿರುತ್ತದೆ. |
| ಆ) | ಸದರಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚರಿಸಲು ಅವಕಾಶ ಕಲ್ಪಿಸಲಾಗುವ ವಾಹನಗಳಿಗೆ (ಲಘು, ಮಧ್ಯಮ ಮತ್ತು ಭಾರೀ ವಾಹನಗಳು) ನಿಗದಿಪಡಿಸಲಾಗುವ ಟೋಲ್ ದರ ಎಷ್ಟು; ಹಾಗೂ ಯಾವ ದಿನಾಂಕದಿಂದ ದರ ನಿಗದಿಪಡಿಸಲಾಗಿದೆ; (ವಿವರ ಒದಗಿಸುವುದು) | ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿ ಸಂಚರಿಸಲು Indian Gazette Notification SO No.GSR 838 (E) ದಿನಾಂಕ:05.12.2008 ರನ್ವಯ ಶುಲ್ಕ ವಸೂಲಾತಿ ಮಾಡಲಾಗುವುದು. ಮೂಲ ದರವನ್ನು ಕಂಡಿಕೆ-4 ರನ್ವಯ ಮತ್ತು ಕಂಡಿಕೆ-5 ರನ್ವಯ ಶುಲ್ಕವನ್ನು ವಾರ್ಷಿಕವಾಗಿ ಪರಿಷ್ಕರಣೆ ಮಾಡಲಾಗುವುದು.<br>ಪ್ರಸ್ತುತ Annual Potential Collection (APC) ಲೆಕ್ಕಾಚಾರ ಮಾಡುವ ಹಂತದಲ್ಲಿದ್ದು, ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದ ನಂತರ ಶುಲ್ಕ ವಸೂಲಾತಿ ಕುರಿತು ನಿಗದಿತ ದರವನ್ನು ನೀಡಲಾಗುವುದು. |
| ಇ) | ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚರಿಸುವ ವಾಹನ ಸವಾರರು ಮತ್ತು ಪ್ರಯಾಣಿಕರಿಗೆ ಒದಗಿಸಲಾಗುವ ಮೂಲ ಸೌಕರ್ಯಗಳು ಯಾವುವು; (ವಿವರ ನೀಡುವುದು) | ಚನ್ನಪಟ್ಟಣ-ರಾಮನಗರ ಬೈಪಾಸ್ ನಲ್ಲಿ Island Rest areaಗಳ ನಿರ್ಮಾಣಕ್ಕಾಗಿ ಅವಕಾಶ ಕಲ್ಪಿಸಲಾಗಿದೆ. ಅಲ್ಲದೆ, ರಿಫ್ರೆಷ್‌ಮೆಂಟ್ಸ್, ಟ್ರಕ್ ಲೇ ಬೈ, ಫ್ಯೂಯಲ್ ಸ್ಟೇಷನ್, ಹೆಲಿಪ್ಯಾಡ್, ಪ್ಯಾಟ್ರೋಲಿಂಗ್ ಸ್ಟಾಫ್ ಆಫೀಸ್, ಆಂಬುಲೆನ್ಸ್ |

| | | |
|---|---|---|
| | | ಸ್ಟೇಷನ್ ಏರಿಯಾ, ಪೋಲೀಸ್ ಸ್ಟೇಷನ್, ಇನ್‌ಸ್ಪೆಕ್ಷನ್ ಬಂಗ್ಲೋ, ಟ್ರಕ್ ಡ್ರೈವರ್‌ಗಳಿಗೆ ಶೌಚಾಲಯ ಹಾಗೂ ಸ್ನಾನ ಗೃಹ ಒಳಗೊಂಡಂತೆ ಡಾರ್ಮೇಟರಿ ನಿರ್ಮಿಸಲು ಅವಕಾಶ ಕಲ್ಪಿಸಲಾಗಿದೆ. |
| ಈ) | ಸರ್ವೀಸ್ ರಸ್ತೆಗಳ ಅಭಿವೃದ್ಧಿ ಕಾಮಗಾರಿಯನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು; | ಬೆಂಗಳೂರು-ಮೈಸೂರು ಹೆದ್ದಾರಿಯ ಸರ್ವೀಸ್ ರಸ್ತೆಗಳನ್ನು ಫೆಬ್ರವರಿ-2023ರ ಕೊನೆಯ ವಾರಾಂತ್ಯದೊಳಗೆ ಪೂರ್ಣಗೊಳಿಸಲಾಗುತ್ತದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ. |
| ಉ) | ಬೈಪಾಸ್ ನಿರ್ಮಾಣದ ನಂತರ ನಗರ/ ಪಟ್ಟಣಗಳ ಮೂಲಕ ಹಾದು ಹೋಗಿದ್ದ ರಸ್ತೆಗಳ ಅಭಿವೃದ್ಧಿ/ ನಿರ್ವಹಣೆಯ ಜವಾಬ್ದಾರಿಯನ್ನು ಯಾರು ನಿರ್ವಹಿಸುತ್ತಾರೆ; (ವಿವರ ನೀಡುವುದು) | ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿನ ಬೈಪಾಸ್‌ಗಳ ನಿರ್ಮಿಸಲಾಗುವ ನಗರ/ಪಟ್ಟಣಗಳಲ್ಲಿನ ರಸ್ತೆಗಳನ್ನು ಅಭಿವೃದ್ಧಿಪಡಿಸಲು One Time Improvement ಅಂದಾಜು ಪಟ್ಟಿ ತಯಾರಿಸುವ ಹಂತದಲ್ಲಿದ್ದು, ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದ ನಂತರ ಸದರಿ ನಗರ/ಪಟ್ಟಣದ ರಸ್ತೆಗಳನ್ನು ಅಭಿವೃದ್ಧಿಪಡಿಸಿ ರಾಜ್ಯ ಸರ್ಕಾರಕ್ಕೆ ಹಸ್ತಾಂತರಿಸಲಾಗುವುದು. |
| ಊ) | ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಕಾಮಗಾರಿಗೆ ಅವಶ್ಯಕ ಸರಕುಗಳನ್ನು ಸಾಗಣೆ ಮಾಡಲು ಬಳಸಿದ ರಸ್ತೆಗಳು ಹಾಳಾಗಿರುವುದರಿಂದ ಸದರಿ ರಸ್ತೆಗಳನ್ನು ಯಾರು ದುರಸ್ಥಿಗೊಳಿಸುತ್ತಾರೆ; (ವಿವರ ನೀಡುವುದು) | ಬೆಂಗಳೂರು-ಮೈಸೂರು ರಸ್ತೆಯನ್ನು ಅಭಿವೃದ್ಧಿ ಪಡಿಸಲು ನೇಮಿಸಲಾಗಿರುವ ರಿಯಾಯಿತಿದಾರರು ಹೆದ್ದಾರಿ ನಿರ್ಮಾಣಕ್ಕಾಗಿ ಅವಶ್ಯಕ ಸರಕುಗಳನ್ನು ಸಾಗಿಸಲು ಬಳಸುವ ರಸ್ತೆಗಳನ್ನು ಸದರಿಯವರು ನಿರ್ವಹಿಸುತ್ತಿದ್ದು, ಗುಂಡಿ ಮುಚ್ಚುವಿಕೆ ಹಾಗೂ ಅಗತ್ಯವಿರುವ ಭಾಗಗಳಿಗೆ ಡಾಂಬರೀಕರಣ ಕಾರ್ಯವನ್ನು ಸಹ ಕೈಗೊಳ್ಳುತ್ತಿದ್ದಾರೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ. |
| ಋ) | ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಕಾಮಗಾರಿಗೆ ಅವಶ್ಯಕ ಸರಕುಗಳನ್ನು ಸಂಗ್ರಹಿಸಲು/ ನಿರ್ಮಿಸಲು ರೈತರಿಂದ ಬಾಡಿಗೆ ಪಡೆಯಲಾಗಿದ್ದ ಜಮೀನುಗಳಿಗೆ ಬಾಡಿಗೆ ಪಾವತಿ ಮಾಡಲಾಗಿದೆಯೇ? (ಪೂರ್ಣ ವಿವರಗಳನ್ನು ನೀಡುವುದು) | ರಿಯಾಯಿತಿಯ ಕರಾರಿನಂತೆ, ಅನ್ವಯವಾಗುವ ಎಲ್ಲಾ ತರಹದ ಪರವಾನಗಿಗಳನ್ನು ಪಡೆಯುವುದು ರಿಯಾಯಿತಿ ದಾರರಿಗೆ ಸಂಬಂಧಿಸಿರುತ್ತದೆ. ಆದಕಾರಣ ಹೆದ್ದಾರಿ ನಿರ್ಮಾಣ ಕಾಮಗಾರಿಗೆ ಅವಶ್ಯಕ ಸರಕುಗಳನ್ನು ಸಂಗ್ರಹಿಸಲು/ನಿರ್ಮಿಸಲು ಪಡೆದ ಜಮೀನುಗಳಿಗೆ ಬಾಡಿಗೆಯನ್ನು ರಿಯಾಯಿತಿದಾರರೇ ನೀಡಬೇಕಾಗಿರುತ್ತದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ. |

ಕಡತ ಸಂಖ್ಯೆ: ಲೋಇ 41 ಸಿಎನ್‌ಹೆಚ್ 2023 (ಇ)

(ಸಿ.ಸಿ. ಪಾಟೀಲ)
ಲೋಕೋಪಯೋಗಿ ಸಚಿವರು